ಆಹಾ ಸುದ್ದಿ!

★ ಸಸಿತೋಟ

ಸೆರ್ಬಿಯಾದ ಡೋಂಜಾ ಎಂಬ ಈ ಹಳ್ಳಿಗೆ ಇನ್ನೊಂದು ಹೆಸರೇ 'ಫಾಟು ಫಾಟು' ಅಲಿಯಾಸ್ ಮೆಣಸಿನ ರಾಜಧಾನಿ. ಹಳ್ಳಿಯ ಎಲ್ಲಾ 1300 ಮನೆಗಳಿಗೆ ಬೇಸಿಗೆಯಿಂದ ಚಳಿಗಾಲದವರೆಗೂ ಮೆಣಸಿನಕಾಯಿ ಸರಮಾಲೆಗಳ ಅಲಂಕಾರ ನಿತ್ಯ ನೋಟ. ಎಂಟ್ರಿ ಕೊಟ್ಟ ಹೊರಗಿನವರು ಕಣ್ಣಲ್ಲಿ ನೀರು ಸುರಿಸುತ್ತ, ಆಕ್ಷಿ ಹೊಡೆಯುತ್ತ ಓಡಾಡಬೇಕು.

ಹಾಂಕಾಂಗ್‌ನಲ್ಲಿ ಮರು ಸಂಸ್ಕರಿಸಿದ ಪ್ಲಾಸ್ಟಿಕ್ ಬಾಟಲ್‌ಗಳಿಂದ ರಚಿಸಿದ ಮೂರು ಅಂತಸ್ತಿನ ಬೃಹತ್ ಲ್ಯಾಂಟರ್ನ್. ಚೀನೀಯರ ಶರತ್ಕಾಲದ ಹಬ್ಬಕ್ಕೆಂದು ನಿರ್ಮಿಸಿದ್ದು. ಪ್ಲಾಸ್ಟಿಕ್, ಜಲ ಮಾಲಿನ್ಯದಿಂದ ತತ್ತರಿಸುತ್ತಿರುವ ಚೀನಿಯರು ಅಕ್ಕಪಕ್ಕದ ದೇಶಗಳಿಗೆ ರಫ್ತು ಮಾಡಿದ ಬಳಿಕವೂ ಈ ಪ್ಲಾಸ್ಟಿಕ್ ಉಳಿದಿದೆ ಎಂದರೆ ವ್ಯಥೆ ಪಡಬೇಕಾದ ಸಂಗತಿಯೇ!



ಬ್ರಿಟನ್ನಿನ ಈ ವಕ್ರ ಮೈ ಕುಶಲಿ ಲೈಲಿನಾ ಹಿಮ್ಮುಖವಾಗಿ ಬಾಗಿಕೊಂಡು ನಡೆಯುವುದರಲ್ಲಿ ಗಿನ್ನೆಸ್ ದಾಖಲೆ ಮಾಡಿದಾಕೆ. 65 ಅಡಿಗಳಷ್ಟು ಇದೇ ರೀತಿ ಬಾಗಿ ನಡೆದು ದಾಖಲೆ ಮಾಡಿದ್ದಾಳಂತೆ. ಚಿಕ್ಕಂದಿನಿಂದಲೂ ಈ ಅಭ್ಯಾಸ ಇದೆ ಎಂದು ಹೆಮ್ಮೆಯಿಂದ ಹೇಳಿಕೊಳ್ಳುವ ಲೈಲಿನಾಗೆ ಶಾಲೆಯಲ್ಲಿ ಬೆನ್ನು ಬಗ್ಗಿಸಿ ನಿಲ್ಲುವ ಶಿಕ್ಷೆ ಬಹುಶಃ ಸಲೀಸಾಗಿತ್ತೇನೋ!

ಹಾಂಕಾಂಗ್ ಜನ ಫ್ಯಾಷನ್‌ಪ್ರಿಯರು. ಮ್ಯಾಚಿಂಗ್ ಬ್ಯಾಗ್ ಖರೀದಿಸುವ ಹವ್ಯಾಸ ಹಲವರಿಗೆ. ಅಲ್ಲಿ ಈಗ ಹಣದ ಮುಗ್ಗಟ್ಟು ಜಾಸ್ತಿಯಾಗಿದ್ದು ಡಿಸೈನರ್ ಬ್ಯಾಗ್ ಖರೀದಿಸಿದವರು ಜೇಬು ಬರಿದು ಮಾಡಿಕೊಂಡು ಕೂತಿದ್ದಾರೆ. ಆದರೆ ಈ ಬ್ಯಾಗ್ ಒತ್ತೆ ಇಟ್ಟುಕೊಂಡು ಸಾಲ ನೀಡುವ ಸೌಲಭ್ಯವೂ ಅಲ್ಲಿ ಶುರುವಾಗಿದೆ. ಬ್ಯಾಗ್ ದರದ ಅರ್ಧದಷ್ಟು ಸಾಲ, ಮೇಲೆ ಶೇ. 4ರಷ್ಟು ಬಡ್ಡಿದರ. ಮಜಾ ಎಂದರೆ ಬ್ಯಾಗ್ ಮಾರುವ ಕಂಪೆನಿಗಳೇ ಈ ಪಾನ್ ಷಾಪ್ ಕೂಡಾ ತೆರೆದಿವೆಯಂತೆ. ವ್ಯತ್ಯಾಸ ಏನೆಂದರೆ ಮುಂಚೆ ಹೆಂಡತಿಯ ಆಭರಣ ಒತ್ತೆ ಇಡುತ್ತಿದ್ದವರು ಈಗ ಹೆಂಡತಿಯ ದುಬಾರಿ ಬ್ಯಾಗ್‌ಗಳನ್ನು ಒತ್ತೆ ಇಡುತ್ತಿದ್ದಾರೆ!

ಇಟಲಿಯ ಜೈಲೊಂದರಲ್ಲಿರುವ ಲಾಕರ್ ಅನ್ನೇ ಕಳ್ಳರು ಹೊತ್ತೊಯ್ದಿದ್ದಾರಂತೆ. ಲಾಕರ್‌ನಲ್ಲಿ 7000 ಯೂರೋ ಹಣವಿತ್ತಂತೆ. ಆ ಹಣವೆಲ್ಲ ಕೈದಿಗಳು ಜೈಲಿನಲ್ಲಿ ವಿವಿಧ ಕೆಲಸ ಮಾಡಿ ಸಂಪಾದಿಸಿದ್ದು. ಈಗ ಅದನ್ನು ಹೊತ್ತೊಯ್ದ ಕಳ್ಳರೂ ಕಳವು ಕೆಲಸ ಮಾಡಿಯೇ ಆ ಹಣವನ್ನು ಸಂಪಾದಿಸಿದ ಹಾಗಾಯ್ತು. ಹೊರಗಿನ ಕಳ್ಳರ ಮೇಲೆ ಒಳಗಿರುವ ಕಳ್ಳರು ಹಿಡಿಶಾಪ ಹಾಕುತ್ತ ಕೂತಿದ್ದಾರಂತೆ.

ಹವಾಯಿಯ ನಾಪೂಪೂ ನಗರದ ಈ ದಂಪತಿಗೆ ಐಡಿ ಕಾರ್ಡ್ ಹಾಗೂ ವಾಹನ ಚಾಲನಾ ಪರವಾನಗಿಯನ್ನು ಇನ್ನೂ ನೀಡಲು ಸಾಧ್ಯವಾಗಿಲ್ಲವಂತೆ. ಕಾರಣ ಅವರ ಹೆಸರನ್ನೇ ಉಚ್ಚರಿಸಲು ಬಾರದು. ಅಷ್ಟೇ ಅಲ್ಲ, ಬರೆಯಲು ಕಾರ್ಡ್‌ನಲ್ಲಿ ಜಾಗವೂ ಸಾಲದಂತೆ. ಪತಿಯ ಹೆಸರು ಕೆಇಐಎಚ್ ಎಎನ್ ಎಐಕೆಯುಕೆಎಯುಎಕೆಎಎಚ್ ಐಎಚ್ ಯುಎಲ್ ಐಎಚ್.... ಹೀಗೇ 40 ಅಕ್ಷರಗಳನ್ನು ದಾಟುತ್ತದೆ. ಪತ್ನಿಯ ಹೆಸರೂ ಇಷ್ಟೇ ಉದ್ದ. ಜೊತೆಗೆ ಪತಿಯ ಹೆಸರನ್ನೂ ಸೇರಿಸಿಕೊಳ್ಳಬೇಕು. ಹೆಸರಿಗೊಂದು ಅರ್ಥ ಇರುತ್ತದೆ ಎಂದುಕೊಂಡಿದ್ದರೆ, ಈ ಹೆಸರು ಅರ್ಥ, ಅನರ್ಥ ಎಲ್ಲವನ್ನೂ ದಾಟಿಕೊಂಡು ಮುಂದೆ ಸಾಗಿಬಿಟ್ಟಿದೆ.